<u>1 ನೇ ಹೆಚ್ಚುವರಿ  ಹಿರಿಯ  ವ್ಯವಹಾರ ನ್ಯಾಯಾಧೀಶರು  ಮತ್ತು</u>

<u>ಪ್ರ.ದ.ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಸಾಗರ</u>

ಸಿ.ಸಿ ನಂ.1586/2024

ಸಾಕ್ಷಿದಾರರ ಹೆಸರು : ಶಿವಾನಂದಪ್ಪ

ತಂದೆಯ/ಗಂಡನ ಹೆಸರು : ಬಸವಣ್ಣಪ್ಪ ರೆಡ್ಡೇರ್

ವಯಸ್ಸು : 46 ವರ್ಷ

ಉದ್ಯೋಗ : ಹೆಚ್ ಸಿ 77

ವಾಸಃ : ಆನವಟ್ಟಿ ಪೋಲೀಸ್ ಠಾಣೆ

ಸಿ.ಡಬ್ಲ್ಯೂ-8 ಪಿ.ಡಬ್ಲ್ಯೂ-8

<u>ದಿನಾಂಕ 07.04.2026 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.</u>

<u>ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ</u>

ನಾನು ಜುನ್ 2016 ರಿಂದ 2018 ಜನವರಿ ವರೆಗೆ ಸಾಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆ.

ದಿಃ 26.11.2017 ರಂದು ನಾನು ಠಾಣಾ ಪ್ರಭಾರದಲ್ಲಿ ಇದ್ದಾಗ ಸರ್ಕಾರಿ ಆಸ್ಪತೆಯಿಂದ ಹೆಚ್.ಎಂ.ಆರ್ ಬಂದಿರುತ್ತದೆ. ಚಾಸಾ 1 ರವರು ನೀಡೀದ ಹೇಳಿಕೆಯನ್ನು ಸ್ವೀಕರಿಸಿ ಪ್ರ.ವ.ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿನಾಂಕಃ 28.11.2017 ರಂದು ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಚಾಸಾ 2 ರವರು ತೋರಿಸಿದ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಸ್ಥಳ ಮತ್ತು ಅಮಾನತ್ತು ಪಂಚನಾಮೆಯನ್ನು ಚಾಸಾ 3 ಮತ್ತು4 ರವರ ಸಮಕ್ಷಮ ನಡೆಸಿರುತ್ತೇವೆ. ಮುದ್ದೆಮಾಲು 1 ರಿಂದ 3 ಅನ್ನು ವಶಕ್ಕೆ ಪಡೆದಿರುತ್ತೇನೆ. ಕಚ್ಚಾ ನಾಕಶೆಯನ್ನು ತಯಾರಿಸಿ, ಪೋಟೋ ತೆಗೆದಿರುತ್ತೇವೆ. ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನ್ಯಾಯಾಲಯದ ಮುಂದಿರುವ ಮುದ್ದೆಮಾಲು 1 ರಿಂದ 3 ಅನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ದಿಃ27.12.2017 ರಂದು ಗಾಯಾಳುಗಳ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ.

ಆರೋಪಿಗಳ ವಿರುದ್ಧ ಆರೋಪ ಸಾಬೀತಾ ಹಿನ್ನೆಲೆಯಲ್ಲಿ ಅಂತಿಮ ದೋಷಾರೋಪಣೆ ಪಟ್ಟಿಯನ್ನು ತಯಾರಿಸಿ ಅದನ್ನು ಮೇಲಾಧಿಕಾರಿಗಳಿಗೆ ಹಾಗೂ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿ ಕೊಂಡಿರುತ್ತೇನೆ,

ಇಂದು ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಕಚ್ಚಾ ನಕಾಶೆಯನ್ನು ನಿಪಿ-5 ಎಂದು, ಸಾಕ್ಷಿಗೆ ನಿಪಿ 1 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ 1 (ಬಿ) ಎಂದು, ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ 2 (ಡಿ) ಎಂದು, ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಅದರಲ್ಲಿ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಹಿಯನ್ನು ನಿಪಿ 3 (ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು :- ಆರೋಪಿಗಳ ಪರ ಶ್ರೀ. ಪಿ ಎಸ್ ವಕೀಲರಿಂದಃ-

ಈ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿದವನು ಹಾಗೂ ಸಂಪೂರ್ಣ ತನಿಖೆಯನ್ನು ನಡೆಸಿ ಹಾಗೂ ಅಂತಿಮ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದು ನಾನೇ ಎಂದರೆ ಸರಿ. ನನಗಿಂದತ ಮೇಲಿನ ಅಧಿಕಾರಿಗಳು ನಮ್ಮ ಠಾಣೆಯಲ್ಲಿ ಇದ್ದಾರೆ ಎಂದರೆ ಸರಿ. ಸಂಪೂರ್ಣ ತನಿಖೆಯನ್ನು ನಾನೇ ಮಾಡಬೇಕೆಂದು ಯಾವುದೇ ಲಿಖಿತ ಆದೇಶ ಮೇಲಾಧಿಕಾರಿಗಳು ಮಾಡಿರುವುದಿಲ್ಲ ಎಂದರೆ ಸರಿ. ನನ್ನ ತನಿಖಾ ಕಾಲದಲ್ಲಿ ನೀರಿನ ವಿಚಾರಕ್ಕೆ ಸಂಬಂದಪಟ್ಟಂತೆ ತಿರ್ಮಾನ ಆಗಿದೆ ಎಂದು ನಮೂದಾಗಿರುವುದು ಯಾರು ಮಾಡಿದ ತಿರ್ಮಾನ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ತಿರ್ಮಾನ ಮಾಡಿದ ಸಂಘದ ಹೆಸರು, ಅದರ ಪದಾಧಿಕಾರಿಗಳ ಹೆಸರು ಹಾಗೂ ಸದರಿ ಸಂಘದ ನಡಾವಳಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸಂಘದಲ್ಲಿ ತಿರ್ಮಾನ ಮಾಡಬೇಕು ಎಂದು ಚಾಸಾ-1 ರವರು ನೀಡಿದರು ಎನ್ನಲಾದ ಅರ್ಜಿಯನ್ನು ನಾನು ಹಾಜರುಪಡಿಸಿರುವುದಿಲ್ಲ. ಚಾಸಾ-3 ರಿಂದ 6 ರವರು ಚಾಸಾ-1 ರವರ ಸಂಬಂಧಿಕರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಯ ಜಮೀನು ಹಾಗೂ

ಪಿರ್ಯಾದುದಾರರ ಜಮೀನು ಅಕ್ಕ ಪಕ್ಕ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಯ ಜಮೀನು ಚಾಸಾ-1 ರವರ ಜಮೀನಿನ ಮೇಲ್ಬಾಗದಲ್ಲಿ ಬರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಜಮೀನಿಗೆ ಸಂಬಂದಪಟ್ಟಂತ ವಿಚಾರದಲ್ಲಿ ಗಲಾಟೆ ಆಗಿದೆ ಎಂದು ಚಾಸಾ-1 ರವರು ದೂರಿನಲ್ಲಿ ನಮೂದು ಮಾಡಿರುವುದರಿಂದ ಜಮೀನನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆರೋಪಿಯ ಜಮೀನು ಚಾಸಾ-1 ರವರ ಜಮೀನಿನ ಮೇಲ್ಬಾಗದಲ್ಲಿ ಬರುತ್ತದೆಯೇ ಇಲ್ಲವೇ ಎಂದು ಪರಿಶೀಲನೆ ಮಾಡಿರುವುದಿಲ್ಲ. ಸಾಮಾನ್ಯವಾಗಿ ಮಳೆಯ ನೀರು ಮೇಲ್ಬಾಗದಿಂದ ಕೆಳಭಾಗಕ್ಕೆ ಹರಿಯುತ್ತದೆ ಎಂದರೆ ಸರಿ. ಪಿರ್ಯಾದುದಾರರ ಜಮೀನು ಆರೋಪಿ ಜಮೀನಿನ ಕೆಳಭಾಗದಲ್ಲಿ ಇರುವುದರಿಂದ ಮೊದಲಿನಿಂದಲೂ ನೀರು ಕೆಳಗೆ ಹರಿದು ಹೋಗಿದ್ದು ಆರೋಪಿಗಳ ಬತ್ತದ ಗೊಣಬೆ ತೆಲಿಕೊಂಡು ಹೋಗಿದ್ದು ಈ ಬಗ್ಗೆ ನಾನು ಯಾವುದೇ ವಿಚಾರಣೆಯನ್ನು ಮಾಡಿ ಹೇಳಿಕೆ ಪಡೆದಿರುವುದಿಲ್ಲ. ನಿಪಿ-5 ರಲ್ಲಿ ಕೃತ್ಯ ನಡೆದ ಸ್ಥಳವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-5 ಅನ್ನು ತೋರಿಸಲಾಗಿ ಅದರಲ್ಲಿ ಕೃತ್ಯ ನಡೆದ ಸ್ಥಳ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಕೇವಲ ಗುರುತಿಸಿರುತ್ತೇವೆ ಬರೆದಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಯಾವುದೇ ಕೃತ್ಯ ನಡೆಯದೇ ಇದ್ದರೂ ಕೃತ್ಯ ನಡೆಯಿತು ಎಂದು ಸುಳ್ಳು ನಿಪಿ-5 ಅನ್ನು ಸೃಷ್ಟಿಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಪಂಚರ, ಚಾಸಾ-1 ರವರ ಸಹಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿ. ನಿಪಿ-5 ಅನ್ನು ಸಂಬಂದಿತ ಇಲಾಖೆಯಿಂದ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನಾವೇ ಮಾಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಪಂಚನಾಮೆ ಮಾಡಿದ್ದೇವೆ ಎಂದು ತೋರಿಸಲು ಯಾವುದೇ ಪೊಟೋಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಒಳರೋಗಿ ಆಗಿದ್ದಾರೋ ಇಲ್ಲವೂ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಆತ ಒಳರೋಗಿ ಆಗಿ ಚಿಕಿತ್ಸೆ ಪಡೆದಿರುತ್ತಾರೆ ಎಂದು ಉತ್ತರಿಸುತ್ತಾರೆ. ಚಾಸಾ-1 ರವರು ಒಳರೋಗಿ ಆಗಿ ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಚಾಸಾ-1 ರವರು ತಾವೇ ಬಿದ್ದು ಪೆಟ್ಟುಮಾಡಿಕೊಂಡಿದ್ದು ಅದಕ್ಕೆ ಪಡೆದ ಗಾಯದ ಪ್ರಮಾಣ ಪತ್ರವನ್ನು ಇಟ್ಟುಕೊಂಡು

ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಸುಳ್ಳು ಅಂತಿಮ ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲು 1 ರಿಂದ 3 ಸಾಮಾನ್ಯವಾಗಿ ಹಳ್ಳಿಯಲ್ಲಿ ಸಿಗುತ್ತದೆ ಎಂದರೆ ಸರಿ. ಮುದ್ದೆಮಾಲು 1 ರಿಂದ 3 ಅನ್ನು ಬಿಳಿ ಬಟ್ಟೆ ಸುತ್ತಿದ್ದಾಗಲೀ, ಅದಕ್ಕೆ ಪಂಚರ ಸಹಿ ಪಡೆದಿದ್ದಾಗಲೀ ಇಲ್ಲ ಎಂದರೆ ಸರಿ. ಮುದ್ದೆಮಾಲು 1 ರಿಂದ 3 ಕ್ಕೂ ಹಾಗೂ ಆರೋಪಿಗಳಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಯನ್ನು ಪಡೆದಿದ್ದಾಗಲೀ, ಮಹಜರ್ ಮಾಡಿದ್ದಾಗಲೀ, ಮುದ್ದೆಮಾಲು 1 ರಿಂದ 3 ಅನ್ನು ಅಮಾನತ್ತು ಪಡೆಸಿಕೊಂಡಿದ್ದಾಗಲೀ ಸುಳ್ಳು ಎಂದರೆ ಸರಿಯಲ್ಲ. ನಿಪಿ–3 ಅನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಯಾವುದೇ ತಪ್ಪು ಮಾಡದೇ ಇದ್ದರೂ ಚಾಸಾ–1 ರವರ ಸುಳ್ಳು ದೂರಿನ ಆದಾರದ ಮೇಲೆ ಸುಳ್ಳು ಪ್ರಥಮ ವರ್ತಮಾನ ವರದಿದಯನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಚಾಸ–1 ರವರ ಬಟ್ಟೆಗೆ ರಕ್ತದ ಕಲೆಗಳು ಆಗಿದ್ದವು. ಚಾಸಾ–1 ರವರ ಬಟ್ಟೆಯನ್ನು ಮುದ್ದೆಮಾಲಾಗಿ ವಶಕ್ಕೆ ಪಡೆದಿರುವುದಿಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

1 ನೇ ಹೆಚ್ಚುವರಿ ಹಿರಿಯ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.